ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ, ಶ್ರೀರಂಗಪಟ್ಟಣ. PW-1

ಸಾಕ್ಷಿಗೆ ಪ್ರಮಾಣ ವಚನ ಮಾಡಲಾದ ದಿ ೦ಃ 18.10.2025

ಪಾಟೀ ಸವಾಲುಃ 13 ನೇ ಪ್ರತಿ ವಾದಿ ಪರ ವಕೀಲರಿಂದಃ

ದಿಃ12.11.1983 ರಂದು ಆಗಿರುವ ಪಾಲುಪಟ್ಟಿಯನು ನಾನು ನೋಡಿರುತ್ತೇನೆ. ಸದರಿ ಪಾಲುಪಟ್ಟಿ ಪ್ರಕಾರ ನನ್ನ ತಾತನಿಗೆ ಸ.ನಂ.7/2 ರಲ್ಲಿ 1 ಎಕರೆ 30 ಗುಂಟೆ ಜಮೀನು ಬಂದಿರುತ್ತದೆ.

ಸದರಿ ಪಾಲುಪಟ್ಟಿ ಪ್ರಕಾರ ನನ್ನ ತಾತನಿಗೆ ಹಾಗೂ ಅಜ್ಜಿಗೆ ಸ.ನಂ.7/2 ರಲ್ಲಿ 1 ಎಕರೆ 30 ಗುಂಟೆ ಜಮೀನು, ಸ.ನಂ.7/3 ರಲ್ಲಿ 29 ಗುಂಟೆ ಹಾಗೂ ಸ.ನಂ.95/2 ರಲ್ಲಿ 23 ಗುಂಟೆ ಜಮೀನು ಬಂದಿರುತ್ತದೆ ಎಂದರೆ ಸರಿಯಲ್ಲ. ಇದರ ಜೊತೆಗೆ ಒಟ್ಟು ಕುಟುಂಬದ ಸಾಲವನ್ನು ತೀರಿಸುವ ಜವಾಬ್ದಾರಿಯನ್ನು ನನ್ನ ತಾತನಿಗೆ ನೀಡಿದ್ದರು ಎಂದರೆ ಸರಿಯಲ್ಲ.

ದಿಃ 12.11.1983 ಕ್ಕೆ ನನ್ನ ಚಿಕ್ಕಪ್ಪನಾದ ಸಿ.ಪುಟ್ಟಸ್ವಾಮಿ ರವರ ಮದುವೆಯಾಗಿತ್ತು.

ದಿಃ 12.11.1983 ಕ್ಕೆ ನನ್ನ ಚಿಕ್ಕಪ್ಪನಾದ ಸಿ.ಪುಟ್ಟಸ್ವಾಮಿ ರವರ ಮದುವೆ ಆಗಿರಲಿಲ್ಲ ಎಂದರೆ ಸರಿಯಲ್ಲ. ಸದರಿ ಪಾಲುಪಟ್ಟಿ ಪ್ರಕಾರ ಪುಟ್ಟಸ್ವಾಮಿ ರವರ ಮದುವೆ ಖರ್ಚು ಹಾಗೂ ಒಟ್ಟು ಕುಟುಂಬದ ಸಾಲವನ್ನು ತೀರಿಸುವ ಜವಾಬ್ದಾರಿಯನ್ನು ನೀಡಿ ಮೇಲಿನ 3 ಸ್ವತ್ತುಗಳನ್ನು ನನ್ನ ತಾತನಿಗೆ ನೀಡಿದ್ದರು ಎಂದರೆ ಸರಿಯಲ್ಲ. ಸದರಿ ಸ್ವತ್ತುಗಳನ್ನು ಮಾರಾಟಮಾಡಿಯಾದರೂ ಪುಟ್ಟಸ್ವಾಮಿ ರವರ ಮದುವೆ ಮಾಡಬೇಕೆಂದು ಮೇಲಿನ ಪಂಚಾಯಿತಿ ಪಾಲುಪಟ್ಟಿಯಲ್ಲಿ ಬರೆದಿರುತ್ತಾರೆ ಎಂದರೆ ಸುಳ್ಳು ಎಂದು ನುಡಿಯುತ್ತಾರೆ. ಆದ ಕಾರಣ ಸ.ನಂ.95/2 ಬಿ ರಲ್ಲಿ 23 ಗುಂಟೆ ಜಮೀನನ್ನು ನನ್ನ ಮತ್ತೊಬ್ಬ ಚಿಕ್ಕಪ್ಪ ವೀರಪ್ಪ ನವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸುಳ್ಳು ಎಂದು ನುಡಿಯುತ್ತಾರೆ. ಸದರಿ ಮಾರಾಟದಿಂದ ಬಂದ ಹಣದಿಂದ ರೂ.50,000/- ಒಟ್ಟು ಕುಟುಂಬದ ಸಾಲವನ್ನು ನನ್ನ ತಾತರವರು ತೀರಿಸಿರುತ್ತಾರೆ ಎಂದರೆ ಸರಿಯಲ್ಲ.

ಸಿ.ಪುಟ್ಟಸ್ವಾಮಿ ರವರಿಗೆ ಮುದುವೆ ಖರ್ಚಿಗೋಸ್ಕರ ನನ್ನ ತಾತನವರು ಸ.ನಂ.7/3 ರಲ್ಲಿ 29 ಗುಂಟೆ ಜಮೀನಿನನ್ನು ವರ್ಗಾವಣೆ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಿಮ್ಮ ತಂದೆ ಮತ್ತು ತಾತ ರವರುಗಳ ನಡುವೆ ವಿಭಾಗ ಆಗಿರುವಂತೆ ಖಾತೆ ವರ್ಗಾವಣೆಯಾಗಿರುತ್ತಯೇ ಎಂಬ ಪ್ರಶ್ನೆಗೆ ಸಾಕ್ಷಿಯು ಆಗಿರುತ್ತದೆ ಎಂದು ನುಡಿಯುತ್ತಾರೆ.

ಸಾಕ್ಷಿಗೆ ಈಗ 1 ಮ್ಯೂಟೇಶನ್ ರಿಜಿಸ್ಟರ್ ಪ್ರತಿ ತೋರಿಸಿ ದಿಃ 12.11.1983 ರ ಪಂಚಾಯಿತಿ ಪಾರಿಕತ್ತಿನಂತೆ ಆಗಿರುವ ಮ್ಯೂಟೇಶನ್ ಅನ್ನು ಸಾಕ್ಷಿ ನೋಡಿ ಸರಿ ಎಂದು

ನುಡಿಯುತ್ತಾರೆ. ಅದನ್ನು 13 ನೇ ಪ್ರತಿವಾದಿ ಪರವಾಗಿ ನಿಡಿ.13 ಎಂದು ಗುರುತಿಸಲಾಯಿತು.

ನಿಮ್ಮ ತಾತರವರು ತೀರಿಕೊಳ್ಳುವ ಕಾಲಕ್ಕೆ ಸ.ನಂ.7/2 ರಲ್ಲಿ 1 ಎಕರೆ 30 ಗುಂಟೆ ಜಮೀನು ನನ್ನ ತಾತ ಮತ್ತು ಅಜ್ಜಿರವರ ಸ್ವಾಧೀನದಲ್ಲಿತ್ತು ಎಂಬ ಪ್ರಶ್ನೆಗೆ ಸಾಕ್ಷಿಯು ಎಲ್ಲರೂ ಅನುಭವಿಸುತ್ತಿದ್ದೇವು ಎಂದು ನುಡಿಯುತ್ತಾರೆ.

ದಾವಾ ಸ್ವತ್ತು ನನ್ನ ತಾತ ಮತ್ತು ಅಜ್ಜಿಯ ಹಿಸ್ಸೆಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅದನ್ನು ನನ್ನ ತಾತ ಮತ್ತು ಅಜ್ಜಿರವರು ಜೀವನಾಂಶಕ್ಕಾಗಿ ಇಟ್ಟುಕೊಂಡಿದ್ದರು ಎಂದು ನುಡಿಯುತ್ತಾರೆ. ದಾವಾ ಸ್ವತ್ತು ನನ್ನ ತಾತ ಹಾಗೂ ಅಜ್ಜಿ ರವರ ಸಂಪೂರ್ಣ ಹಕ್ಕು ಮತ್ತು ಸ್ವಾಧೀನಕ್ಕೆ ನೀಡಿದ್ದರೂ ಎಂದರೆ ಸರಿಯಲ್ಲ. ನನ್ನ ತಾತ ತೀರಿಕೊಂಡ ನಂತರ ದಾವಾ ಸ್ವತ್ತು ನನ್ನ ಅಜ್ಜಿ ಹೆಸರಿಗೆ ವರ್ಗಾವಣೆಯಾಗಿರುತ್ತದೆ. ನನ್ನ ಅಜ್ಜಿ ಹೆಸರಿಗೆ ಆಗಿರುವ ಮ್ಯೂಟೇಶನ್ ಅನ್ನು ಜಂಟಿ ಖಾತೆ ಮಾಡಿಕೊಳ್ಳಲು ನಾನು ಚಾಲೆಂಜ್ ಮಾಡಿರುವುದಿಲ್ಲ.

ನನ್ನ ತಾತರವರು, ಅವರಿಗೆ ಇದ್ದ ಖಾಯಿಲೆಗೆ ಚಿಕಿತ್ಸೆ ತೆಗೆದುಕೊಳ್ಳುತ್ತಿದ್ದರು. ಆ ರೀತಿ ಚಿಕಿತ್ಸೆ ತೆಗೆದುಕೊಳ್ಳುತ್ತಿದ್ದರು ಎಂದು ತೋರಿಸಲು ನನ್ನ ಬಳಿ ದಾಖಲೆ ಇಲ್ಲ. ನನ್ನ ತಾತರವರು ಬದುಕಿರುವವರೆಗೂ, ಅವರಿಗೆ ಯಾವುದೇ ಖಾಯಿಲೆ ಇರಲಿಲ್ಲ ಎಂದರೆ ಸರಿಯಲ್ಲ.

ದಿಃ05.08.1998 ರಂದು ನನ್ನ ತಾತರವರು ದಾವಾ ಸ್ವತ್ತು ಯಾರು ಯಾರಿಗೆ ಹೋಗಬೇಕೆಂದು ವಿಲ್ ಮಾಡಿ ಇಟ್ಟಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅದು ಸೃಷ್ಟಿತ ದಾಖಲೆ ಎಂದು ನುಡಿಯುತ್ತಾರೆ.

ದಾವಾ ಸ್ವತ್ತನ್ನು ನನ್ನ ತಾತ ಮತ್ತು ಅಜ್ಜಿ ರವರಿಗೆ ನೀಡಿರುವ ಕಾರಣ ನನ್ನ ಅಜ್ಜಿ ಬದುಕಿರುವವರೆಗೂ ನನಗೆ ಯಾವುದೇ ಹಕುಪ್ಕಿ ಇರುವುದಿಲ್ಲ ಎಂದರೆ ಸರಿಯಲ್ಲ. ದಿಃ 05.08.1998 ರ ವಿಲ್ ಪ್ರಕಾರ ನನ ಅಜ್ಜಿ ತೀರಿಕೊಂಡ ನಂತರ ದಾವಾ ಸ್ವತ್ತು ವಿಲೇವಾರಿ ಆಗತಕ್ಕದು ಹೊರತು, ನಮಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

**ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಸಾ.ಓ.ಹೇ.ಸ.ಒ**

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
**ಜೆಎಂಎಫ್‌ಸಿ., ಶ್ರೀರಂಗಪಟ್ಟಣ.**